**Akashvani : Bangalore**
**National Bulletin In Kannada**
**17.03.2025 / 13.10 hrs**
ಆಕಾಶವಾಣಿ, ಬೆಂಗಳೂರು
ರಾಷ್ಟ್ರೀಯ ವಾರ್ತೆಗಳು
**17.03.2025 / 13.10 hrs**

**<><*<><>*><>**

<u>ಮುಖ್ಯಾಂಶಗಳು</u>

೧. ಮೂರು ದಿನಗಳ ೧೦ನೇ ರೈಸಿನಾ ಸಂವಾದ ಕಾರ್ಯಕ್ರಮದಲ್ಲಿಂದು ಪ್ರಧಾನಿ ನರೇಂದ್ರ ಮೋದಿ ಭಾಗಿ

೨. ಒಂಬತ್ತು ತಿಂಗಳ ಬಳಿಕ ನಾಳೆ ಭೂಮಿಗೆ ಹಿಂದಿರುಗಲಿರುವ ಗಗನ ಯಾತ್ರಿಗಳಾದ ಸುನಿತಾ ವಿಲಿಯಮ್ಸ್, ಬುಚ್ ವಿಲ್ಮೋರ್ ; ನಾಸಾ ಮಾಹಿತಿ

೩. ವಕ್ಫ್ ತಿದ್ದುಪಡಿ ಮಸೂದೆ ಬಡ ಮುಸ್ಲಿಮರ ಪರವಾಗಿದೆ - ಜಂಟಿ ಸಂಸದೀಯ ಅಧ್ಯಕ್ಷ ಜಗದಾಂಬಿಕಾ ಪಾಲ್

೪. ಫಿಲಿಪೈನ್ಸ್‌ನಲ್ಲಿಂದು ಮೂರು ದಿನಗಳ ಆಸಿಯಾನ್ ಗೇಮಿಂಗ್ ಶೃಂಗಸಭೆಗೆ ಚಾಲನೆ

೫. ಇಂಗ್ಲೆಂಡ್‌ನಲ್ಲಿ ಇಂದು ೨೦೨೫ ರ ಕಬಡ್ಡಿ ವಿಶ್ವಕಪ್ ಆರಂಭ

**<><*<><>*><>**

ಪ್ರಧಾನಿ ನರೇಂದ್ರ ಮೋದಿ ನವದೆಹಲಿಯಲ್ಲಿಂದು ೧೦ ನೇ ಆವೃತ್ತಿಯ ರೈಸಿನಾ ಸಂವಾದ ೨೦೨೫ ಅನ್ನು ಉದ್ಘಾಟಿಸಲಿದ್ದಾರೆ. ನ್ಯೂಜಿಲೆಂಡ್ ಪ್ರಧಾನಿ ಕ್ರಿಸ್ಟೋಫರ್ ಲಕ್ಸನ್ ಉದ್ಘಾಟನಾ ಅಧಿವೇಶನದಲ್ಲಿ ಮುಖ್ಯ ಅತಿಥಿಯಾಗಿ ಭಾಗವಹಿಸಿ ಪ್ರಧಾನ ಭಾಷಣ ಮಾಡಲಿದ್ದಾರೆ. ಮೂರು ದಿನಗಳ ರೈಸಿನಾ ಸಂವಾದ ಇಂದಿನಿಂದ ಮಾರ್ಚ್ ೧೯ ರವರೆಗೆ ನಡೆಯಲಿದೆ. ಕಾಲಚಕ್ರ - ಜನರು, ಶಾಂತಿ ಮತ್ತು ಭೂಮಿ ಎಂಬುದು ಈ ವರ್ಷದ ಸಂವಾದದ ಧ್ಯೇಯವಾಕ್ಯವಾಗಿದೆ. ಈ ಕಾರ್ಯಕ್ರಮದ ಸಂದರ್ಭದಲ್ಲಿ, ಜಾಗತಿಕ ನಾಯಕರು, ಚಿಂತಕರು ಮತ್ತಿತರರು ಹಲವು ವಿಷಯಾಧಾರಿತ ಚರ್ಚೆಗಳಲ್ಲಿ ತಮ್ಮನ್ನು ತಾವು ತೊಡಗಿಸಿಕೊಳ್ಳಲಿದ್ದಾರೆ. ೧೦ನೇ ರೈಸಿನಾ ಸಂವಾದ ಸುಮಾರು ೧೨೫ ದೇಶಗಳ ಪ್ರತಿನಿಧಿಗಳ ಭಾಗವಹಿಸುವಿಕೆಗೆ ಸಾಕ್ಷಿಯಾಗಲಿದೆ.

ಸಚಿವರು, ವಿವಿಧ ರಾಷ್ಟ್ರಗಳ ಮತ್ತು ಸರ್ಕಾರಗಳ ಮಾಜಿ ಅಧ್ಯಕ್ಷರು, ಮಿಲಿಟರಿ ಕಮಾಂಡರ್‌ಗಳು, ಕೈಗಾರಿಕೋದ್ಯಮಿಗಳು, ತಂತ್ರಜ್ಞಾನ ನಾಯಕರು, ಶಿಕ್ಷಣ ತಜ್ಞರು, ಮಾಧ್ಯಮ ಪ್ರತಿನಿಧಿಗಳು ಸೇರಿದಂತೆ ಮತ್ತಿತರರು ಕಾರ್ಯಕ್ರಮದಲ್ಲಿ ಭಾಗವಹಿಸಲಿದ್ದಾರೆ. ೩ ಸಾವಿರದ ೫೦೦ ಕ್ಕೂ ಹೆಚ್ಚು ಜನರು ಈ ಸಂವಾದದಲ್ಲಿ ಪ್ರತ್ಯಕ್ಷವಾಗಿ ಪಾಲ್ಗೊಳ್ಳಲಿದ್ದು, ವಿಶ್ವದಾದ್ಯಂತ ಲಕ್ಷಾಂತರ ಜನರು ವಿವಿಧ ಡಿಜಿಟಲ್ ವೇದಿಕೆಗಳಲ್ಲಿ ಈ ಕಾರ್ಯಕ್ರಮವನ್ನು ವೀಕ್ಷಿಸಲಿದ್ದಾರೆ. ರೈಸಿನಾ ಸಂವಾದ ಜಾಗತಿಕ ಸಮುದಾಯ ಎದುರಿಸುತ್ತಿರುವ ಅತ್ಯಂತ ಸವಾಲಿನ ಸಮಸ್ಯೆಗಳನ್ನು ಪರಿಹರಿಸಲು ಬದ್ಧವಾಗಿರುವ ಭಾರತದ ಭೌಗೋಳಿಕ ರಾಜಕೀಯ ಮತ್ತು ಭೂ ಅರ್ಥಶಾಸ್ತ್ರದ ಪ್ರಮುಖ ಸಮ್ಮೇಳನವಾಗಿದೆ.

<><*<><>*><>

ನವದೆಹಲಿಯಲ್ಲಿಂದು ಪ್ರಧಾನಿ ನರೇಂದ್ರ ಮೋದಿ, ನ್ಯೂಜಿಲೆಂಡ್ ಪ್ರಧಾನಿ ಕ್ರಿಸ್ಟೋಫರ್ ಲಕ್ಸನ್ ಅವರೊಂದಿಗೆ ಮಾತುಕತೆ ನಡೆಸಿದರು. ಈ ವೇಳೆ ಭಾರತ-ನ್ಯೂಜಿಲೆಂಡ್ ಸಂಬಂಧಗಳ ಬಲವರ್ಧನೆಗೆ ವಿವಿಧ ಅಂಶಗಳನ್ನೊಳಗೊಂಡ ಚರ್ಚೆ ನಡೆಯಿತು. ಐದು ದಿನಗಳ ಭೇಟಿಗಾಗಿ ನ್ಯೂಜಿಲೆಂಡ್ ಪ್ರಧಾನಿ ನಿನ್ನೆ ನವದೆಹಲಿಗೆ ಆಗಮಿಸಿದರು. ಇಂದು ಅವರು, ರೈಸಿನಾ ಸಂವಾದ - ೨೦೨೫ರ ಉದ್ಘಾಟನಾ ಅಧಿವೇಶನದಲ್ಲಿ ಮುಖ್ಯ ಅತಿಥಿಯಾಗಿ ಭಾಗವಹಿಸಿ ಪ್ರಧಾನ ಭಾಷಣ ಮಾಡಲಿದ್ದಾರೆ. ನಂತರ ಅವರು, ರಾಷ್ಟ್ರಪತಿ ಭವನದಲ್ಲಿ ರಾಷ್ಟ್ರಪತಿ ದ್ರೌಪದಿ ಮುರ್ಮು ಅವರನ್ನು ಭೇಟಿ ಮಾಡಲಿದ್ದಾರೆ. ಭೇಟಿಯ ಭಾಗವಾಗಿ ಅವರು, ಮುಂಬೈನಲ್ಲಿ ಉದ್ಯಮಿಗಳೊಂದಿಗೆ ಸಂವಾದ ನಡೆಸಲಿದ್ದಾರೆ. ಪ್ರಧಾನಿ ಕ್ರಿಸ್ಟೋಫರ್ ಲಕ್ಸನ್ ಅವರ ಭೇಟಿ, ಭಾರತ-ನ್ಯೂಜಿಲೆಂಡ್ ನಡುವಿನ ದ್ವಿಪಕ್ಷೀಯ ಸಂಬಂಧಗಳನ್ನು ಬಲಪಡಿಸುವ ಗುರಿ ಹೊಂದಿದೆ.

<><*<><>*><>

ಅಂತಾರಾಷ್ಟ್ರೀಯ ಬಾಹ್ಯಾಕಾಶ ನಿಲ್ದಾಣದಲ್ಲಿ ಒಂಬತ್ತು ತಿಂಗಳಿಗೂ ಹೆಚ್ಚು ಕಾಲ ಸಿಲುಕಿಕೊಂಡಿರುವ ಇಬ್ಬರು ಅಮೆರಿಕದ ಗಗನಯಾತ್ರಿಗಳು ನಾಳೆ ರಾತ್ರಿ ಭೂಮಿಗೆ ಮರಳಲಿದ್ದಾರೆ. ಗಗನಯಾತ್ರಿಗಳಾದ ಸುನೀತಾ ವಿಲಿಯಮ್ಸ್ ಮತ್ತು ಬುಚ್ ವಿಲ್ಮೋರ್ ಅವರನ್ನು ಅಮೆರಿಕ ಗಗನಯಾತ್ರಿ ಮತ್ತು ರಷ್ಯಾದ ಗಗನಯಾತ್ರಿಗಳೊಂದಿಗೆ ಸ್ಪೇಸ್‌ಎಕ್ಸ್ ಕ್ರೂ ಡ್ರ್ಯಾಗನ್ ಬಾಹ್ಯಾಕಾಶ ನೌಕೆಯಲ್ಲಿ ಮರಳಿ ಕರೆತರಲಾಗುವುದು ಎಂದು ನಾಸಾ ತಿಳಿಸಿದೆ. ನಾಸಾ ಗಗನಯಾತ್ರಿ ನಿಕ್ ಹಾಗ್ಯ ಮತ್ತು ರಷ್ಯಾದ ರೋಸ್ಕೋಸ್ಮೋಸ್‌ನ ಗಗನಯಾತ್ರಿ ಅಲೆಕ್ಸಾಂಡರ್ ಗೋರ್ಬುನೋವ್ ಕೂಡ ಡ್ರ್ಯಾಗನ್ ಬಾಹ್ಯಾಕಾಶ ನೌಕೆಯಲ್ಲಿ ಹಿಂದಿರುಗಲಿದ್ದಾರೆ.

<><*<><>*><>

ಸಾಮಾಜಿಕ ಹಾಗೂ ಕೈಗಾರಿಕಾ ಸವಾಲುಗಳನ್ನು ಎದುರಿಸಲು ನವೀನ ೫-ಜಿ ಚಾಲಿತ ಪರಿಹಾರಗಳ ಅಭಿವೃದ್ಧಿಗೆ ವೇಗ ನೀಡುವ ಗುರಿಯೊಂದಿಗೆ ಕೇಂದ್ರ ದೂರಸಂಪರ್ಕ ಇಲಾಖೆ ಆರು ತಿಂಗಳ ಅವಧಿಯ ೫-ಜಿ ನಾವೀನ್ಯತಾ ಹ್ಯಾಕಥಾನ್ - ೨೦೨೫ ಉಪಕ್ರಮವನ್ನು ಘೋಷಿಸಿದ. ಈ ಕಾರ್ಯಕ್ರಮದಲ್ಲಿ ವಿದ್ಯಾರ್ಥಿಗಳು, ನವೋದ್ಯಮಗಳು ಹಾಗೂ ವೃತ್ತಿಪರರಿಗೆ ಮಾರ್ಗದರ್ಶನ, ಧನಸಹಾಯ ಹಾಗೂ ನೂರಕ್ಕೂ ಹೆಚ್ಚು ೫-ಜಿ ಬಳಕೆಯ ಪ್ರಯೋಗಾಲಯಗಳಿಗೆ ಪ್ರವೇಶವನ್ನು ಒದಗಿಸಿಕೊಡುತ್ತದೆ. ಎಐ ಚಾಲಿತ, ನೆಟ್‌ವರ್ಕ್ ನಿರ್ವಹಣೆ, ತಂತ್ರಜ್ಞಾನ ಚಾಲಿತ ಪರಿಹಾರ ಕ್ವಾಂಟಮ್ ಸಂವಹನ ಸೇರಿದಂತೆ ಸಂಬಂಧಿತ ವಿಷಯಗಳ ಕೇಂದ್ರೀಕೃತ ಪ್ರಸ್ತಾವನೆಗಳನ್ನು ಈ ಹ್ಯಾಕಥಾನ್ ಆಹ್ವಾನಿಸುತ್ತದೆ. ಈ ಹ್ಯಾಕಥಾನ್ ಹಲವು ಹಂತಗಳನ್ನು ಹೊಂದಿದ್ದು, ಮೊದಲಿಗೆ ನಿರ್ಧಿಷ್ಟ ಪ್ರಸ್ತಾವನೆಗಳನ್ನು ಆಯ್ಕೆ ಮಾಡಿ ಮಾರ್ಗದರ್ಶನ ನೀಡಲಾಗುತ್ತದೆ. ಬಳಿಕ ಅಗ್ರ ೨೫ ರಿಂದ ೫೦ ತಂಡಗಳು ಪ್ರಗತಿ ಹಂತಕ್ಕೆ ಅರ್ಹರು ಎಂದು ಪರಿಗಣಿಸಿ ಅವರಿಗೆ ಧನ ಸಹಾಯ ನೀಡಿ ಪ್ರೋತ್ಸಾಹಿಸಲಾಗುತ್ತದೆ. ಸೆಪ್ಟೆಂಬರ್‌ನಲ್ಲಿ ನಡೆಯಲಿರುವ ಕೊನೆಯ ಹಂತದಲ್ಲಿ ಮೌಲ್ಯಮಾಪನ ಮತ್ತು ಪ್ರದರ್ಶನ ನಡೆಯಲಿದ್ದು, ಈ ವೇಳೆ ತಂಡಗಳು ತಮ್ಮ ತಮ್ಮ ಉತ್ಪನ್ನಗಳನ್ನು ೫ ರಿಂದ ೭ ತಜ್ಞರನ್ನೊಳಗೊಂಡ ಮೌಲ್ಯಮಾಪನ ಸಮಿತಿ ಎದುರು ಪ್ರಸ್ತುತಪಡಿಸುತ್ತವೆ. ಈ ಹ್ಯಾಕಥಾನ್‌ನ ವಿಜೇತರು ಹಲವು ಬಹುಮಾನಗಳ ಜೊತೆಗೆ ೫ ಲಕ್ಷ ರೂಪಾಯಿ ಬಹುಮಾನ ಪಡೆಯಲಿದ್ದು, ರನ್ನರ್ ಅಪ್ ತಂಡ ೩ ಲಕ್ಷ ಹಾಗೂ ೨ನೇ ರನ್ನರ್ ಅಪ್ ತಂಡ ಒಂದೂವರೆ ಲಕ್ಷ ರೂಪಾಯಿ ಬಹುಮಾನವನ್ನು ಪಡೆಯಲಿದೆ. ಇದರ ಜೊತೆಗೆ ಅತ್ಯುತ್ತಮ ಕಲ್ಪನೆ ಮತ್ತು ಅತ್ಯುತ್ತಮ ನಾವೀನ್ಯತಾ ಮಾದರಿ ಉತ್ಪನ್ನಕ್ಕೆ ವಿಶೇಷ ಉಲ್ಲೇಖದೊಂದಿಗೆ ತಲಾ ೫೦ ಸಾವಿರ ರೂಪಾಯಿ ನೀಡಲಾಗುವುದು.

<><*<><>*><>

ವಕ್ಫ್ ತಿದ್ದುಪಡಿ ಮಸೂದೆ ಬಡ ಮುಸ್ಲಿಮರ ಪರವಾಗಿದೆ ಎಂದು ವಕ್ಫ್ ತಿದ್ದುಪಡಿ ಮಸೂದೆ ಕುರಿಂತೆ ರಚಿಸಲಾಗಿರುವ ಜಂಟಿ ಸಂಸದೀಯ ಸಮಿತಿಯ ಅಧ್ಯಕ್ಷ ಜಗದಾಂಬಿಕಾ ಪಾಲ್ ಹೇಳಿದ್ದಾರೆ. ವಕ್ಫ್ ತಿದ್ದುಪಡಿ ಮಸೂದೆಯ ವಿರುದ್ಧ ಅಖಿಲ ಭಾರತ ಮುಸ್ಲಿಂ ವೈಯಕ್ತಿಕ ಕಾನೂನು ಮಂಡಳಿಯ ಪ್ರತಿಭಟನೆಯ ಕುರಿತು ನವದೆಹಲಿಯಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ೪೨೮ ಪುಟಗಳ ವರದಿಯನ್ನು ಸಂಸತ್ತಿನಲ್ಲಿ ಮಂಡಿಸಲಾಗಿದ್ದು, ವಕ್ಫ್ ಮಂಡಳಿಯ ಸುಧಾರಣೆಗಾಗಿ ತಿದ್ದುಪಡಿಗಳನ್ನು ಮಾಡಲಾಗಿದೆ ಎಂದು ಹೇಳಿದರು. ಸರ್ಕಾರದ ವಿರುದ್ಧ ಅಲ್ಪಸಂಖ್ಯಾತ ಸಮುದಾಯಗಳಲ್ಲಿ ಹುಸಿ ಸುದ್ದಿ ಹಬ್ಬಿಸುವ ಪ್ರಯತ್ನಗಳು ನಡೆಯುತ್ತಿವೆ ಎಂದಿರುವ ಅವರು ನ್ಯಾಯಯುತ ಮತ್ತು ಸಮತೋಲಿತ ಶಾಸನ ರೂಪಿಸಲು ಮುಸ್ಲಿಂ ಸಂಘಟನೆಗಳು ಮತ್ತು ಇತರ

ಪಾಲುದಾರರೊಂದಿಗೆ ಸಮಾಲೋಚಿಸಲು ಸರ್ಕಾರ ಮಸೂದೆಯನ್ನು ಜಂಟಿ ಸಂಸದೀಯ ಸಮಿತಿಗೆ ಉಲ್ಲೇಖಿಸಿದೆ ಎಂದು ಅವರು ತಿಳಿಸಿದರು.

ಧ್ವನಿ : ಜಗದಾಂಬಿಕಾ ಪಾಲ್ (೨೮ ಸೆಕೆಂಡ್‌ಗಳು)

<><*<><>*><>

ಫಿಲಿಪೈನ್ಸ್‌ನ ಮನಿಲಾದಲ್ಲಿರುವ ಶಾಂಗ್ರಿ-ಲಾ ದಿ ಫೋರ್ಟ್‌ನಲ್ಲಿ ಇಂದು ಮೂರು ದಿನಗಳ ಆಸಿಯಾನ್ ಗೇಮಿಂಗ್ ಶೃಂಗಸಭೆಗೆ ಚಾಲನೆ ದೊರೆಯಲಿದೆ. ಇದೇ ೧೯ ರವರೆಗೆ ನಡೆಯುವ ಈ ಅಂತಾರಾಷ್ಟ್ರೀಯ ಗೇಮಿಂಗ್ ಸಮ್ಮೇಳನದಲ್ಲಿ ಫಿಲಿಪೈನ್ಸ್, ಭಾರತ, ಆಸ್ಟ್ರೇಲಿಯಾ, ಮಲೇಷ್ಯಾ, ಜರ್ಮನಿ, ಬ್ರಿಟನ್, ರಷ್ಯಾ, ಜಪಾನ್, ಸಿಂಗಾಪುರ ಸೇರಿದಂತೆ ಹಲವು ರಾಷ್ಟ್ರಗಳ ಸುಮಾರು ೧ ಸಾವಿರದ ೬೦೦ ಜನರು ಭಾಗವಹಿಸಲಿದ್ದಾರೆ. ಗೇಮಿಂಗ್ ಶೃಂಗಸಭೆಯ ೭ನೇ ಆವೃತ್ತಿ ಇದಾಗಿದ್ದು, ಜಾಗತಿಕ ದೃಷ್ಟಿಕೋನದೊಳಗೆ ಆಸಿಯಾನ್ ಪ್ರದೇಶದಲ್ಲಿ ನಿರಂತರವಾಗಿ ಬದಲಾಗುತ್ತಿರುವ ಗೇಮಿಂಗ್ ವಲಯದ ಚೌಕಟ್ಟು ದಾರಿಮಾಡಿಕೊಡುವ ಹೊಸ ಅವಕಾಶಗಳ ಮೇಲೆ ಕೇಂದ್ರೀಕರಿಸುತ್ತದೆ. ವಿಶ್ವಾದ್ಯಂತದ ನೀತಿ ನಿರೂಪಕರು, ನಿರ್ವಾಹಕರು ಮತ್ತು ಇತರ ಉದ್ಯಮ ಪಾಲುದಾರರು ಸಭೆ ಸೇರಿ ಹೊಸ ರೀತಿಯ ಗೇಮಿಂಗ್ ಮನರಂಜನಾ ವಲಯದ ಅವಕಾಶಗಳು ಮತ್ತು ಬದಲಾಗುತ್ತಿರುವ ಗೇಮಿಂಗ್ ಮಾರುಕಟ್ಟೆ ಗ್ರಾಹಕ ಮಾದರಿಗಳ ಒಳನೋಟವನ್ನು ಹಂಚಿಕೊಳ್ಳಲಿದ್ದಾರೆ.

<><*<><>*><>

ಭಾರತದ ಮುಖ್ಯ ನ್ಯಾಯಮೂರ್ತಿ ಸಂಜೀವ್ ಖನ್ನಾ ಇಂದು ಕೊಲ್ಕೊತ್ತಾ ಹೈಕೋರ್ಟ್‌ನ ನ್ಯಾಯಾಧೀಶರಾದ ನ್ಯಾಯಮೂರ್ತಿ ಜಯ್‌ಮಲ್ಯ ಬಾಗ್ಚಿ ಅವರಿಗೆ ಸುಪ್ರೀಂ ಕೋರ್ಟ್ ನ್ಯಾಯಾಧೀಶರಾಗಿ ಪ್ರಮಾಣವಚನ ಬೋಧಿಸಿದರು. ಸುಪ್ರೀಂಕೋರ್ಟ್ ಆವರಣದಲ್ಲಿ ಪ್ರಮಾಣ ವಚನ ಸ್ವೀಕಾರ ಸಮಾರಂಭ ನಡೆಯಿತು. ನ್ಯಾಯಮೂರ್ತಿ ಬಾಗ್ಚಿ ಅವರ ನೇಮಕಾತಿಯೊಂದಿಗೆ, ಸುಪ್ರೀಂ ಕೋರ್ಟ್ ಈಗ ೩೩ ನ್ಯಾಯಮೂರ್ತಿಗಳನ್ನು ಹೊಂದಿದಂತಾಗಿದೆ. ಬಾಗ್ಚಿ ಅವರು ಆರು ವರ್ಷಗಳಿಗೂ ಹೆಚ್ಚು ಕಾಲ ಸರ್ವೋಚ್ಚ ನ್ಯಾಯಾಲಯದಲ್ಲಿ ಸೇವೆ ಸಲ್ಲಿಸಲಿದ್ದು, ಈ ಅವಧಿಯಲ್ಲಿ ಅವರು ಭಾರತದ ಮುಖ್ಯ ನ್ಯಾಯಮೂರ್ತಿಯ ಪಾತ್ರವನ್ನು ಸಹ ವಹಿಸಿಕೊಳ್ಳುವ ನಿರೀಕ್ಷೆಯಿದೆ.

<><*<><>*><>

ಅಮೆರಿಕ ಅಧ್ಯಕ್ಷ ಡೋನಾಲ್ಡ್ ಟ್ರಂಪ್ ನಾಳೆ ರಷ್ಯಾ ಅಧ್ಯಕ್ಷ ವ್ಲಾಡಿಮಿರ್ ಪುಟಿನ್ ಅವರೊಂದಿಗೆ ಮಾತುಕತೆ ನಡೆಸಲಿದ್ದಾರೆ. ಸುದ್ದಿಗಾರರೊಂದಿಗೆ ಮಾಹಿತಿ ಹಂಚಿಕೊಂಡಿರುವ ಅಧ್ಯಕ್ಷ ಟ್ರಂಪ್, ಮಾತುಕತೆಯ ವೇಳೆ ಉಕ್ರೇನ್ ಯುದ್ಧ ಕೊನೆಗಾಣಿಸುವ ಪ್ರಯತ್ನಗಳ ಭಾಗವಾಗಿ ಭೂ ಹಾಗೂ ವಿದ್ಯುತ್ ಸ್ಥಾವರಗಳ ಕುರಿತು ಚರ್ಚಿಸಲಾಗುವುದು ಎಂದಿದ್ದಾರೆ. ಜನವರಿಯಲ್ಲಿ ಡೊನಾಲ್ಡ್ ಟ್ರಂಪ್ ತಮ್ಮ ೨ನೇ ಅವಧಿಯ ಅಧ್ಯಕ್ಷ ಸ್ಥಾನ ವಹಿಸಿದ ಬಳಿಕ, ಉಭಯ ನಾಯಕರ ನಡುವೆ ನಡೆಯುತ್ತಿರುವ ೨ನೇ ಬಹಿರಂಗ ಕರೆ ಇದಾಗಿದೆ. ಫೆಬ್ರವರಿಯಲ್ಲಿ ನಡೆದ ತಮ್ಮ ಹಿಂದಿನ ಮಾತುಕತೆಯಲ್ಲಿ ಉಭಯ ನಾಯಕರು, ಉಕ್ರೇನ್‌ನಲ್ಲಿ ಯುದ್ಧ ಕೊನೆಗೊಳಿಸುವ ಉದ್ದೇಶದ ಉನ್ನತ ಮಟ್ಟದ ಮಾತುಕತೆಗಳನ್ನು ಆರಂಭಿಸಲು ಸಹಮತ ವ್ಯಕ್ತಪಡಿಸಿದ್ದರು.

<><*<><>*><>

೨೦೨೫ ರ ಕಬಡ್ಡಿ ವಿಶ್ವಕಪ್ ಇಂದು ಸಂಜೆ ಇಂಗ್ಲೆಂಡ್‌ನಲ್ಲಿ ಆರಂಭವಾಗಲಿದೆ. ವೊಲ್ವರ್‌ಹ್ಯಾಂಪ್ಟನ್‌ನಲ್ಲಿ ನಡೆಯಲಿರುವ ತಮ್ಮ ಮೊದಲ ಪಂದ್ಯದಲ್ಲಿ ಭಾರತೀಯ ಪುರುಷರ ತಂಡ ಇಟಲಿ ತಂಡವನ್ನು ಎದುರಿಸಲಿದೆ. ಈ ಪಂದ್ಯ ಭಾರತೀಯ ಕಾಲಮಾನ ಸಂಜೆ ೫:೩೦ ಕ್ಕೆ ಆರಂಭವಾಗಲಿದೆ.

<><*<><>*><>

ಟ್ರಿನಿಡ್ಯಾಡ್ ಹಾಗೂ ಟೊಬೆಗೋ ರಾಷ್ಟ್ರದ ನೂತನ ಪ್ರಧಾನಿಯಾಗಿ ಇಂದು ಸ್ಟೂವರ್ಟ್ ಯಂಗ್ ಪ್ರಮಾಣ ವಚನ ಸ್ವೀಕರಿಸಲಿದ್ದಾರೆ. ಸೆಂಟ್ ಆನ್ಸ್‌ನಲ್ಲಿರುವ ರಾಷ್ಟ್ರಪತಿ ಭವನದಲ್ಲಿ ಪ್ರಮಾಣವಚನ ಸಮಾರಂಭ ನಡೆಯಲಿದೆ. ಸ್ಟೂವರ್ಟ್ ಯಂಗ್ ಪ್ರಸ್ತುತ ಇಂಧನ ಮತ್ತು ಇಂಧನ ಕೈಗಾರಿಕೆಗಳ ಸಚಿವರಾಗಿ ಕಾರ್ಯ ನಿರ್ವಹಿಸುತ್ತಿದ್ದಾರೆ. ಅವರು, ನಿರ್ಗಮಿತ ಪ್ರಧಾನಿ ಡಾ. ಕೈತ್ ರೊಲೆ, ಅವರ ನಂತರದ ಪ್ರಧಾನಿಯಾಗಲಿದ್ದಾರೆ. ಪೀಪಲ್ಸ್ ನ್ಯಾಷನಲ್ ಮುಮೆಂಟ್ಸ್ - ಪಿಎನ್‌ಎಂ ನ ವಿಶೇಷ ಸಮಾವೇಶದಲ್ಲಿ ಪ್ರಧಾನಿಯಾಗಿ ತನ್ನ ಕೊನೆಯ ಸಾರ್ವಜನಿಕ ಭಾಷಣ ಮಾಡಿದ ಕೈತ್ ರೊಲೆ, ಅವರು ಅಧಿಕಾರದಿಂದ ಕೆಳಗಿಳಿಯುತ್ತಿದ್ದರು ಟ್ರಿನಿಡ್ಯಾಡ್ ಹಾಗೂ ಟೊಬೆಗೋ ರಾಷ್ಟ್ರಕ್ಕೆ ಸದಾ ಸಮರ್ಪಿತನಾಗಿರುವುದಾಗಿ ತಿಳಿಸಿದ್ದಾರೆ.

<><*<> ಇಲ್ಲಿಗೆ ವಾರ್ತಾ ಪ್ರಸಾರ ಮುಕ್ತಾಯವಾಯಿತು <>*><>

<><*<> ನಮ್ಮ ಮುಂದಿನ ವಾರ್ತಾ ಪ್ರಸಾರ ಸಂಜೆ ೬.೪೦ ಕ್ಕೆ <>*><>